I/491951/2023

ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/ 26/ಸಿಡಿಸಿ(1) 2023
(ಕ.ನಂ:1183630)

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ,
ಬೆಂಗಳೂರು-560001,
ದಿನಾಂಕ:30/09/2023

**-: ಸಾರ್ವಜನಿಕ ನೋಟೀಸ್:-**

ವಿಷಯ: ಟುಟೋರಿಯಲ್ / ಕೋಚಿಂಗ್ ಸಂಸ್ಥೆಗಳು ಕರ್ನಾಟಕ ಶಿಕ್ಷಣ ಕಾಯಿದೆ 1983 ಪ್ರಕಾರ ನೊಂದಾಯಿಸಿಕೊಳ್ಳುವ ಬಗ್ಗೆ.

*****

ರಾಜ್ಯದಲ್ಲಿ ಡಿಪ್ಲೋಮ / ಬಿ.ಇ / ಇತರೆ ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಟುಟೋರಿಯಲ್ ಸಂಸ್ಥೆಗಳು ಕಾರ್ಯ ನಿರ್ವಹಿಸಲು ಕರ್ನಾಟಕ ಶಿಕ್ಷಣ ಕಾಯಿದೆ 1983 ರ ಸೆಕ್ಷನ್ 35 ರ "ದ ಕರ್ನಾಟಕ ಟುಟೋರಿಯಲ್ ಇನ್‌ಸ್ಟಿಟ್ಯೂಷನ್ಸ್ (ರಿಜಿಸ್ಟ್ರೇಷನ್ ಅಂಡ್ ರೆಗುಲೇಷನ್) ರೂಲ್ಸ್ 2001" ಪ್ರಕಾರ ಈ ಕೆಳಕಂಡ ನಿಯಮಗಳನ್ನು ಪಾಲಿಸಬೇಕಾಗಿರುತ್ತದೆ.

1. ತಾಂತ್ರಿಕ ಶಿಕ್ಷಣದಲ್ಲಿ ಮನೆಪಾಠ/ ಕೋಚಿಂಗ್/ ಸಿಇಟಿ ಕೋಚಿಂಗ್ ಇತ್ಯಾದಿ ಟುಟೋರಿಯಲ್ ತರಗತಿಗಳನ್ನು ನಡೆಸಲು, ಸಂಸ್ಥೆಗಳು ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ, ಕರ್ನಾಟಕ ಶಿಕ್ಷಣ ಕಾಯಿದೆ 1983 ರ ಸೆಕ್ಷನ್ 35 ರ "ದ ಕರ್ನಾಟಕ ಟುಟೋರಿಯಲ್ ಇನ್‌ಸ್ಟಿಟ್ಯೂಷನ್ಸ್ (ರಿಜಿಸ್ಟ್ರೇಷನ್ ಅಂಡ್ ರೆಗ್ಯುಲೇಷನ್) ರೂಲ್ಸ್ 2001" ನಿಯಮಗಳ ಪ್ರಕಾರ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ, ನೋಂದಾಯಿಸುವುದು ಕಡ್ಡಾಯವಾಗಿರುತ್ತದೆ.
2. ಸದರಿ ಟುಟೋರಿಯಲ್ ಸಂಸ್ಥೆಗಳಲ್ಲಿ ಸರ್ಕಾರಿ/ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರು / ಬೋಧಕರು / ಕಾರ್ಯಗಾರ ಸಿಬ್ಬಂದಿ / ಕಛೇರಿ ಸಿಬ್ಬಂದಿಯವರು ಟುಟೋರಿಯಲ್ ತರಗತಿಗಳನ್ನು ನಡೆಸುವುದು ಅಥವಾ ಪಾಠ-ಪ್ರವಚನಗಳನ್ನು ಮಾಡುವುದು ಕರ್ನಾಟಕ ಶಿಕ್ಷಣ ಕಾಯಿದೆ 1983 ರ ಸೆಕ್ಷನ್ 35 ರ "ದ ಕರ್ನಾಟಕ ಟುಟೋರಿಯಲ್ ಇನ್‌ಸ್ಟಿಟ್ಯೂಷನ್ಸ್ (ರಿಜಿಸ್ಟ್ರೇಷನ್ ಅಂಡ್ ರೆಗುಲೇಷನ್) ರೂಲ್ಸ್ 2001" ಪ್ರಕಾರ ಅಪರಾಧವಾಗಿದ್ದು, ಟುಟೋರಿಯಲ್ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವುದನ್ನು ನಿರ್ಬಂಧಿಸಿದೆ.
3. ಅನಧಿಕೃತವಾಗಿ ಮನೆಪಾಠ/ ಕೋಚಿಂಗ್/ ಸಿಇಟಿ ಕೋಚಿಂಗ್ ಇತ್ಯಾದಿ ಟುಟೋರಿಯಲ್ ತರಗತಿಗಳನ್ನು ನಡೆಸುವುದು ಅಥವಾ ಸಂಸ್ಥೆಗಳನ್ನು ಹೊಂದುವುದು ಕರ್ನಾಟಕ ಶಿಕ್ಷಣ ಕಾಯಿದೆ 1983 ರ ಪ್ರಕಾರ ಅಪರಾಧವಾಗಿರುತ್ತದೆ.

4. ನೋಂದಾಯಿತ ಟುಟೋರಿಯಲ್ ಸಂಸ್ಥೆಗಳು "ದ ಕರ್ನಾಟಕ ಟುಟೋರಿಯಲ್ ಇನ್‌ಸ್ಟಿಟ್ಯೂಷನ್ಸ್ (ರಿಜಿಸ್ಟ್ರೇಷನ್ ಅಂಡ್ ರೆಗುಲೇಷನ್) ರೂಲ್ಸ್ 2001" ರಲ್ಲಿ ತಿಳಿಸಿದ ನಿಯಮಾವಳಿಗಳ ಪ್ರಕಾರ ಕಾರ್ಯನಿರ್ವಹಿಸಬೇಕಾಗಿದ್ದು, ನಿಯಮಾವಳಿಗಳ ಪ್ರಕಾರ ಪ್ರತಿವರ್ಷ ಇಲಾಖೆಗೆ ವಾರ್ಷಿಕ ವರದಿಯನ್ನು ಸಲ್ಲಿಸಿ ನೋಂದಣಿಯನ್ನು ನವೀಕರಿಸಬೇಕಾಗಿರುತ್ತದೆ.

5. ನೋಂದಾಯಿತ ಟುಟೋರಿಯಲ್ ಸಂಸ್ಥೆಗಳು ಕಾಯಿದೆಯಲ್ಲಿ ತಿಳಿಸಿದ ನಿಯಮಗಳಂತೆ ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಿದ ಕಟ್ಟಡ, ನಿಗಧಿತ ವಿಸ್ತೀರ್ಣವುಳ್ಳ ತರಗತಿ ಕೋಣೆಗಳು, ಸಕ್ಷಮ ಪ್ರಾಧಿಕಾರದಿಂದ ಪ್ರಮಾಣಿಕರಿಸಿದ ಶೌಚಾಲಯದ/ನೀರಿನ ವ್ಯವಸ್ಥೆಯನ್ನು ಹೊಂದಿರತಕ್ಕದ್ದು.

6. ಒಂದು ಟುಟೋರಿಯಲ್ ತರಗತಿಯಲ್ಲಿ ಗರಿಷ್ಠ 30 ವಿದ್ಯಾರ್ಥಿಗಳಿಗೆ ಅನುಗುಣವಾಗಿ ಪೀಠೋಪಕರಣಗಳ ವ್ಯವಸ್ಥೆ ಕಲ್ಪಿಸಬೇಕಾಗಿರುತ್ತದೆ. ಒಬ್ಬ ವಿದ್ಯಾರ್ಥಿಗೆ ಕನಿಷ್ಠ 5 ರಿಂದ 7 ಚದರ ಅಡಿ ವಿಸ್ತೀರ್ಣತೆಯ ತರಗತಿ ಜಾಗವನ್ನು ಒದಗಿಸಬೇಕಾಗಿರುತ್ತದೆ.

7. ಟುಟೋರಿಯಲ್ ತರಗತಿಗಳನ್ನು ನಡೆಸಲು ಪರಿಣಿತ ಉಪನ್ಯಾಸಕರು/ಶಿಕ್ಷಕರನ್ನು ನೇಮಿಸಿ, ಅವರ ವಿದ್ಯಾರ್ಹತೆ, ಅನುಭವ, ಸಂಭಾವನೆ ಇತ್ಯಾದಿ ವಿವರಗಳನ್ನು ಇಲಾಖೆಗೆ ಸಲ್ಲಿಸಬೇಕಾಗಿರುತ್ತದೆ ಹಾಗೂ ವಿದ್ಯಾರ್ಥಿಗಳಿಂದ ಪಡೆದ ಟುಟೋರಿಯಲ್ ಶುಲ್ಕದ (ಮೂಲ ರಶೀದಿಗಳ ಸಮೇತ) ವಿವರಗಳು, ಬಟವಾಡೆಗಳ ವಿವರಗಳು, ಇತರೆ ಖರ್ಚುವೆಚ್ಚಗಳ ವಿವರಗಳನ್ನೊಂಡ ವಾರ್ಷಿಕ ವರದಿಯನ್ನು ಇಲಾಖೆಗೆ ಸಲ್ಲಿಸಬೇಕಾಗಿರುತ್ತದೆ.

8. ಮೇಲ್ಕಂಡ ನಿಯಮಾವಳಿಗಳನ್ನು ಉಲ್ಲಂಘಿಸಿದ್ದಲ್ಲಿ, ಕರ್ನಾಟಕ ಶಿಕ್ಷಣ ಕಾಯಿದೆ 1983 ರ ಸೆಕ್ಷನ್ 35 ರ "ದ ಕರ್ನಾಟಕ ಟುಟೋರಿಯಲ್ ಇನ್‌ಸ್ಟಿಟ್ಯೂಷನ್ಸ್ (ರಿಜಿಸ್ಟ್ರೇಷನ್ ಅಂಡ್ ರೆಗುಲೇಷನ್) ರೂಲ್ಸ್ 2001" ಪ್ರಕಾರ ಸಂಸ್ಥೆಯ ಟುಟೋರಿಯಲ್ ನೋಂದಣಿಯನ್ನು ರದ್ದುಪಡಿಸಲಾಗುವುದು ಹಾಗು ಟುಟೋರಿಯಲ್ ಕಾರ್ಯವನ್ನು ಸ್ಥಗಿತಗೊಳಿಸಲಾಗುವುದು.

(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

**ಜಂಟಿ ನಿರ್ದೇಶಕರು (ಸಿಡಿಸಿ)**

**ಲಗತ್ತು:** "ದ ಕರ್ನಾಟಕ ಟುಟೋರಿಯಲ್ ಇನ್‌ಸ್ಟಿಟ್ಯೂಷನ್ಸ್ (ರಿಜಿಸ್ಟ್ರೇಷನ್ ಅಂಡ್ ರೆಗುಲೇಷನ್) ರೂಲ್ಸ್ 2001" ನಿಯಮಗಳ ಪ್ರತಿ.

**ಇವರಿಗೆ:** ರಾಜ್ಯದ ಡಿಪ್ಲೋಮ / ಬಿ.ಇ / ಇತರೆ ತಾಂತ್ರಿಕ ಶಿಕ್ಷಣದ ಟುಟೋರಿಯಲ್ / ಕೋಚಿಂಗ್ ಶಿಕ್ಷಣ ಸಂಸ್ಥೆಗಳು - ಸೂಕ್ತ ಕ್ರಮಕ್ಕಾಗಿ.

**ಪ್ರತಿ:** ಇ- ಗೌವರ್ನನ್ಸ್ ವಿಭಾಗ- ತಾಂ.ಶಿ.ಇ, ಬೆಂಗಳೂರು- ಇಲಾಖೆಯ
ವೆಬ್ ಸೈಟ್‌ನಲ್ಲಿ ಪ್ರಕಟಿಸಲು.